## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್–119 ಧರ್ಮರಾಯಸ್ವಾಮಿ ದೇವಸ್ಥಾನ, ದಾಸಪ್ಪ ಆಸ್ಪತ್ರೆ ಆವರಣ, ಟೌನ್‌ಹಾಲ್ ಹತ್ತಿರ, ಬೆಂಗಳೂರು**


ಸಂಖ್ಯೆ:ಸ.ಇಂ/ವಾ–119/ವಾರ್ಡ್ ಸಭೆ/2020–21 ದಿನಾಂಕ:20/02/2021

# ವಾರ್ಡ್ –119ರ ವಾರ್ಡ್ ಸಭೆಯ ನಡವಳಿ

ದಿನಾಂಕ:20/02/2021 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–119ರ ವಾರ್ಡ್ ಕಛೇರಿಯಲ್ಲಿ ಶ್ರೀ. ಡಿ.ಕೆ. ಮಧುಸೂದನ್, ಸ.ಕಾ.ನಿ.ಅ (ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ ರವರ ಕಛೇರಿ) ವಾರ್ಡ್119ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು :–**

1. ಶ್ರೀ. ಡಿ.ಕೆ. ಮಧುಸೂದನ್. ನೋಡಲ್ ಅಧಿಕಾರಿ ವಾರ್ಡ್–119
2. ಶ್ರೀ. ಎನ್. ಪ್ರದೀಪ್ ಕುಮಾರ್, ಸಂಚಾಲಕರು ಮತ್ತು ಕಾರ್ಯದರ್ಶಿ ವಾರ್ಡ್–119.
3. ಶ್ರೀ. ಸೀತಾರಾಮಯ್ಯ, ಹಿ.ಆ.ಪ ವಾರ್ಡ್–119.
4. ಶ್ರೀ. ಬಾಬುಕುಮಾರ್, ಕೆಲಸ ಪರಿವೀಕ್ಷಕರು ವಾರ್ಡ್–119.
5. ಶ್ರೀ. ಸಂಪತ್, ಮೀಟರ್ ರೀಡರ್ BWSSB
6. ಶ್ರೀ. ದೊರೈರಾಜು, ಕಂದಾಯ ಇಲಾಖೆ,
7. ಶ್ರೀ. ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ.

**ಹಾಜರಿದ್ದ ಸ್ಥಳೀಯರು :–**

1. ಶ್ರೀ. ಸತೀಶ್
2. ಶ್ರೀ. ಗೋಪಾಲ್
3. ಶ್ರೀ. ಸುಲೇಮಾನ್
4. ಶ್ರೀ. ಗೋಪಿ

ಮೇಲ್ಕಂಡ ಸಭೆಗೆ ಎಲ್ಲರನ್ನು ಸ್ವಾಗತಿಸಿ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಮಾನ್ಯ ಅಧ್ಯಕ್ಷರು ಈ ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ಅವಲೋಕಿಸುತ್ತಾ ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ವಿಚಾರಿಸಲಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ತಿಳಿಸಲಾಯಿತು.

ಮು.ತಿ.ನೋ..

**ಚರ್ಚಿಸಲಾದ ವಿಷಯಗಳು:-**

1. **ಕಾಮಗಾರಿ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸತೀಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಎ.ವಿ. ರಸ್ತೆ, ಕಲಾಸಿಪಾಳ್ಯ ಮುಖ್ಯರಸ್ತೆಯಲ್ಲಿ ರಸ್ತೆ ಬದಿಯ ಚರಂಡಿಯಲ್ಲಿ ಸ್ಲಾಬ್‌ಗಳು ಇಲ್ಲದೇ ಇರುವ ಬಗ್ಗೆ ದೂರಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ವಾರ್ಡಿನ ಅಭಿಯಂತರರು ಉತ್ತರಿಸಿ ಅತಿ ಜರೂರಾಗಿ ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

2. **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಗೋಪಾಲ್ ರವರು ಮಾತನಾಡಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ ವತಿಯಿಂದ ರಸ್ತೆ ಅಗೆದಿದ್ದು, ಕಾಮಗಾರಿ ನಡೆದಿರುವ ಸ್ಥಳಗಳಲ್ಲಿ ಸುರಕ್ಷತಾ ಕ್ರಮ ವಹಿಸಿರುವುದಿಲ್ಲವೆಂದು ದೂರಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟವರಿಗೆ ತಿಳಿಸಿ ಸೂಕ್ತ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸತೀಶ್ ರವರು ಮಾತನಾಡಿ ಕಲಾಸಿಪಾಳ್ಯ 3ನೇ ಅಡ್ಡರಸ್ತೆಯಲ್ಲಿ ಹೊಸದಾಗಿ ಕುಡಿಯುವ ನೀರಿನ ಕೊಳವೆಗಳನ್ನು ಅಳವಡಿಸಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡುವಂತೆ ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟವರಿಗೆ ತಿಳಿಸಿ ಸೂಕ್ತ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

3. **ವಿದ್ಯುತ್ ಇಲಾಖೆ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸತೀಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಎ.ಎಂ. ಲೇನ್ ಹಲವಾರು ಪ್ರದೇಶಗಳಲ್ಲಿ ಬೀದಿ ದೀಪ ಉರಿಯುತ್ತಿಲ್ಲವೆಂದು ದೂರಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟವರಿಗೆ ಪತ್ರ ಬರೆದು ಸೂಕ್ತ ಕ್ರಮ ವಹಿಸಲು ತಿಳಿಸುವುದಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸುಲೇಮಾನ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ Over Head Cables ಗಳನ್ನು ತೆರವುಗೊಳಿಸುವಂತೆ ಕೋರಿದರು. ಈ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಶ್ರೀ. ರಾಜ್‌ಕುಮಾರ್ ನಾಯಕ್ ರವರಿಗೆ ಪತ್ರ ಬರೆಯುವಂತೆ ಅಧ್ಯಕ್ಷರು ಸೂಚನೆ ನೀಡಿದರು.

ಪು.ತಿ.ನೋ..

4. **ಘನತ್ಯಾಜ್ಯ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸತೀಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹಾಲಿ ಇರುವ ಸುಲಭ ಶೌಚಾಲಯಗಳಲ್ಲಿ ಶುಲ್ಕಗಳನ್ನು ರೂ. 5/- ಕ್ಕೆ ಹಾಗೂ ರೂ. 10/-ಕ್ಕೆ ಏರಿಸುವಂತೆ ಕೋರಿದರು ಇದರಿಂದ ಶೌಚಾಲಯಗಳ ನಿರ್ವಹಣೆ ಸಮರ್ಪಕವಾಗಿ ನಡೆಯುವುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟವರಿಗೆ ಪತ್ರ ಬರೆದು ಸೂಕ್ತ ಕ್ರಮ ವಹಿಸಲು ತಿಳಿಸುವುದಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸತೀಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ವಾಣಿವಿಲಾಸ್ ಕಾಲೇಜ್, ಮಾಮೂಲ್ ಪೇಟೆ, ಬಸ್ ನಿಲ್ದಾಣ ಇನ್ನೂ ಹಲವಾರು ಕಡೆಗಳಲ್ಲಿ ಹೊಸದಾಗಿ ಶೌಚಾಲಯ ನಿರ್ಮಾಣದ ಅವಶ್ಯಕತೆ ಇರುವುದಾಗಿ ಸಭೆಗೆ ತಿಳಿಸಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ಚಿಕ್ಕಪೇಟೆ ರವರಿಗೆ ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸುಲೇಮಾನ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ಹೆಚ್ಚಾಗಿದ್ದು, ರಾತ್ರಿಪಾಳಿಯಲ್ಲಿ ಕಸ ಸಂಗ್ರಹಣೆ ಕಾರ್ಯದ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಈ ವಿಷಯವಾಗಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾವುದೆಂದು ಸಭೆಗೆ ತಿಳಿಸಿದರು.

5. **ಕಂದಾಯ ವಿಭಾಗ:-**

ಕಂದಾಯ ವಿಭಾಗವನ್ನು ಉದ್ದೇಶಿಸಿ ಅಧ್ಯಕ್ಷರು ಮಾತನಾಡಿ ಪ್ರತಿ ವಾರದ ಕಂದಾಯ ವಸೂಲಾತಿ ಬಗ್ಗೆ ವಿವರಗಳನ್ನು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ಹಾಜರುಪಡಿಸುವಂತೆ ಸೂಚಿಸಿದರು. ಹಾಗೂ ಕಳೆದ ವಾರದ ಕಂದಾಯ ವಸೂಲಾತಿ ಬಗ್ಗೆ ವಿಚಾರಿಸಲಾಗಿ ಶ್ರೀ. ದೊರೈರಾಜು ಕಂದಾಯ ಪರಿವೀಕ್ಷಕರು ಉತ್ತರಿಸಿ ಈ ವಾರದಲ್ಲಿ ರೂ. 23,42,613/- ಗಳಷ್ಟು ಕಂದಾಯ ವಸೂಲಾತಿಯಾಗಿರುವುದಾಗಿ ತಿಳಿಸಿದರು.

6. **ಸಂಚಾರಿ ಪೊಲೀಸ್ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸುಲೇಮಾನ್ ರವರು ಮಾತನಾಡಿ ಪಿ.ಪಿ. ಲೇನ್ ಮತ್ತು ಎಸ್.ಜೆ.ಪಿ ರಸ್ತೆ ಎಡ ತಿರುವಿನಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದು, ಹೆಚ್ಚಿನ ಟ್ರಾಫಿಕ್ ಇರುವುದಾಗಿ ದೂರಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರಿಗೆ ಪತ್ರ ಬರೆದು ಸೂಕ್ತ ಕ್ರಮ ವಹಿಸಲು ತಿಳಿಸುವುದಾಗಿ ಸಭೆಗೆ ತಿಳಿಸಿದರು.

ಪು.ತಿ.ನೋ..

7. **ಆರೋಗ್ಯ ಇಲಾಖೆ:-**

ಅಧ್ಯಕ್ಷರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮತ್ತು ಆರೋಗ್ಯ ಇಲಾಖೆಯವರನ್ನು ಕುರಿತು ಸಾರ್ವಜನಿಕರಿಗೆ ಕೋವಿಡ್ ಪರೀಕ್ಷೆ ಹಾಗೂ ಸ್ವಚ್ಚತೆಯ ಬಗ್ಗೆ ಮೆಘಾ ಫೋನ್ ಬಳಸಿ ಸಾರ್ವಜನಿಕರ ಗಮನಕ್ಕೆ ಬರುವ ರೀತಿಯಲ್ಲಿ ಪ್ರಚಾರ ಮಾಡುವಂತೆ ಸೂಚನೆ ನೀಡಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಹಾಜರಿದ್ದ ಸ್ಥಳೀಯರಿಗೆ ನಮ್ಮ ಪಾಲಿಕೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಗೈರುಹಾಜರಾದ ಅಧಿಕಾರಿಗಳಿಗೆ ಎಚ್ಚರಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿ, ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಎಚ್ಚರಿಸಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸ್ಥಳೀಯರಿಗೆ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರದೀಪ್‌ಕುಮಾರ್ ಎನ್)
ಕಾರ್ಯದರ್ಶಿ
ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ

D. K. Madhusudhan 20/2/21
(ಡಿ.ಕೆ. ಮಧುಸೂದನ್)
ನೋಡಲ್ ಅಧಿಕಾರಿ
ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ